# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

**ಸಿ. ಸಿ. ನಂ. 62/2021**

| | | | |
|---|---|---|---|
| ಹೆಸರು ಶ್ರೀ/ಶ್ರೀಮತಿ | ಗೌಸಪಟೇಲ | ಸಿಡಬ್ಲ್ಯೂ-04 | ಪಿಡಬ್ಲ್ಯೂ-01 |
| ತಂದೆಯ/ಗಂಡನ ಹೆಸರು | ಹುಸೇನ ಪಟೇಲ | | |
| ವಯಸ್ಸು | 68 ವರ್ಷ | | |
| ಉದ್ಯೋಗ | - | | |
| ವಾಸ ಸ್ಥಳ | ಉಡಗಿ ಗ್ರಾಮ | | |

ದಿನಾಂಕ 28-11-2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ಚಾಸಾ-1 ಇವರ ಪರಿಚಯ ಇರುತ್ತದೆ. ಆರೋಪಿತರ ಪರಿಚಯ ನನಗೆ ಇರುತ್ತದೆ. ಈಗ 3 ವರ್ಷಗಳ ಹಿಂದೆ 11.00 ಗಂಟೆಗೆ ನಾನು ನಮ್ಮೂರಿನ ಜಿಲಾನಿ ಹೊಟೇಲ ಮುಂದೆ ನಿಂತಿದ್ದು ಇತ್ತು. ಆಗ ಚಾಸಾ-1 ಇವರು ಸರ್ವೇ ಮಾಡಲು ಅರ್ಜಿ ಸಲ್ಲಿಸಿದ್ದು ಇತ್ತು. ಆಗ ಸರ್ವೇ ಮಾಡಲು ಅಧಿಕಾರಿಗಳು ಬಂದಿದ್ದು ಆಗ ಆರೋಪಿತರೆಲ್ಲರೂ ಚಾಸಾ-1 ಇವರಿಗೆ ಎ ಮಾಕೇ ಲೌಡೆ ಸರ್ವೇ ಕೈಸೆ ಕರತೇ ಬೊಸಡಿಕೆ ಎಂದು ಬೈದು ಜಗಳ ತೆಗೆದಿರುತ್ತಾರೆ. ಆಗ ತಯಬ ಇತನು ಚಾಸಾ-1 ಇವರಿಗೆ ಮೂಗಿಗೆ, ಬಾಯಿಗೆ ಕೈಯಿಂದ ಹೊಡೆದಿರುತ್ತಾನೆ. ಆಗ ಚಾಸಾ-1 ಕೆಳಗೆ ಬಿದ್ದಿರುತ್ತಾರೆ. ಜಮೀರ ಇತನು ಕಟ್ಟಿಗೆಯಿಂದ ಬೆನ್ನಿಗೆ ಹೊಡೆದಿರುತ್ತಾನೆ. ತಾಹಿರ ಇತನು ಚಾಸಾ-1 ಇವರಿಗೆ ಹೊಟ್ಟೆಗೆ ಹೊಡೆದಿರುತ್ತಾನೆ. ಸುಲೆಮಾನ ಇತನು ಹೊಟ್ಟೆಗೆ ಹೊಡೆದಿರುತ್ತಾನೆ. ಸುಲೆಮಾನ ಇತ ಮುಷ್ಠೆ ಮಾಡಿ ಹೊಡೆದಿರುತ್ತಾನೆ. ಆಗ ನಾನು ಜಗಳ ಬಿಡಿಸಿರುತ್ತೇನೆ. ಜಗಳವನ್ನು ಬಾಬು ಸಹ ಬಿಡಿಸಿರುತ್ತಾನೆ. ಆಗ ಆರೋಪಿತರು ನಮಗೂ ಸಹ ಹೊಡೆದಿರುತ್ತಾರೆ. ಆಗ ಮಲ್ಲೆಶಪ್ಪ ಎಂಬುವವರು ನಮ್ಮನ್ನು ಬಿಡಿಸಿರುತ್ತಾರೆ. ಅದೇ ರೀತಿ ಜೀಲಾನಿ ಎಂಬುವವರು ಸಹ ಬಿಡಿಸಿರುತ್ತಾರೆ. ಸದರಿ ವಿಷಯವನ್ನು ನಾನು ಪೊಲೀಸರಿಗೆ ತಿಳಿಸಿರುತ್ತೇನೆ. ಹೇಳಿಕೆ ನೀಡಿರುತ್ತೇನೆ. ಕಟ್ಟಿಗೆಯನ್ನು ಗುರುತಿಸುತ್ತೇನೆ. ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಜಗಳ ಬಿಡಿಸಿದ ನಂತರ ಆರೋಪಿತರು ಚಾಸಾ-1 ಇವರನ್ನು ಖಲ್ಲಾಸ ಮಾಡುತ್ತೇನೆ ಅಂತಾ ಜೀವದ ದಮಕಿ ನೀಡಿರುತ್ತಾರೆ. ಘಟನೆಯ ಬಗ್ಗೆ ಚಾಸಾ-1 ಇವರು ಪೊಲೀಸ ಠಾಣೆಗೆ ದೂರು ನೀಡಿರುತ್ತಾರೆ.

**(ಪಾಟೀ ಸವಾಲುಃ ಈ ಹಂತದಲ್ಲಿ ಶ್ರೀ ಹೆಚ್. ಎಲ್. ಎ. ಆರೋಪಿತರ ಪರ ವಕೀಲರ**

**ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)**

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

**SYH*